ನೀರಿನ ಸಂಗ್ರಹವಾಗಿ ರೈತನ ಬೆಳೆಗೆ ಅನುಕೂಲವಾಗಬೇಕು. ಒಡ್ಡಿನ ಮೇಲೆ forest ನವರು ಗಿಡ ಬೆಳೆಸುವಂಥದ್ದಾಗಲಿ ಈ ಎಲ್ಲಾ ಅನುಕೂಲಗಳು ಆ ಭಾಗದ ರೈತರಿಗೆ ಸಿಗಲಿ ಎನ್ನುವ ದೃಷ್ಟಿಯಿಂದ ಮಾಡಿರುವುದು. ಇದೆಲ್ಲವನ್ನೂ ಸರಿಯಾದ ರೀತಿಯಲ್ಲಿ ಮಾಡಿದರೆ ಆ ಭಾಗದ ರೈತರಿಗೆ ಒಳ್ಳೆಯದಾಗುತ್ತದೆ. ಆ ದೃಷ್ಟಿಯಿಂದ ತಾವು ಇನ್ನೂ ಸಲಹೆಗಳನ್ನು ಕೊಟ್ಟರೆ ಆ ಸಲಹೆಗಳನ್ನು ಅಳವಡಿಸಿಕೊಳ್ಳುತ್ತೇವೆ.

ಶ್ರೀ ಡಿ.ಎನ್. ಜೀವರಾಜ್ : Merge ಮಾಡಿಕೊಂಡುಬಿಡಿ.

ಶ್ರೀ ಉಮೇಶ್ ವಿ ಕತ್ತಿ : ತಾಲ್ಲೂಕು ಮಟ್ಟದ ಕೆಳ ಹಂತದಲ್ಲಿ merge ಮಾಡುತ್ತೇವೆ. ವಿರೋಧ ಪಕ್ಷದ ಉಪನಾಯಕರು ಹೇಳಿದ ಹಾಗೆ World Bank Aid ಬರುವುದರಿಂದ Directorate ಇಟ್ಟುಕೊಂಡು ಜಿಲ್ಲಾಮಟ್ಟದ ಅಧಿಕಾರಿ ಇಟ್ಟುಕೊಂಡು ಅದರ ಕೆಳಗಡೆ merge ಮಾಡಿದರೆ ಅದು automatic ಆಗಿ control ಗೆ ಬರುತ್ತದೆ. ಒಬ್ಬ ತಾಲ್ಲೂಕು ಅಧಿಕಾರಿ ಅದರ ಕೆಳಗಡೆ ಹೋಬಳಿ ಮಟ್ಟದ ಅಧಿಕಾರಿ control ಗೆ ಬಂದು, ಜಲಾನಯನ ಬರುವುದರಿಂದ ಅವನು control ಅನ್ನು ಸರಿಯಾಗಿ ಮಾಡುವುದಕ್ಕೆ ಆಗುತ್ತದೆ. ಆ ದೃಷ್ಟಿಯಿಂದ ಮಾಡುತ್ತೇವೆ. ಈ ಬಗ್ಗೆ ತಮಗೆಲ್ಲರಿಗೂ ಮಾಹಿತಿ ಕಳುಹಿಸುವ ವ್ಯವಸ್ಥೆ ಮಾಡುತ್ತೇವೆ. ತಾವು ಸಲಹೆಗಳನ್ನು ಏನಾದರೂ ಕೊಟ್ಟರೆ ಮುಂದಿನ ದಿನಮಾನಗಳಲ್ಲಿ ಹೆಚ್ಚಿನ ಅಭಿವೃದ್ಧಿಪಡಿಸುವಂಥ ಕೆಲಸ ನಾವು-ನೀವು ಎಲ್ಲರೂ ಕೂಡಿ ಮಾಡೋಣವೆಂದು ತಮಗೆ ಹೇಳುವುದಕ್ಕೆ ಇಚ್ಚಿಸುತ್ತೇನೆ.

ಕುಡಿಯುವ ನೀರಿನ ಕೊಳವೆ ಬಾವಿ

71 (369) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಕುಡಿಯುವ ನೀರಿಗಾಗಿ ಕೊರೆದ ಬಾವಿಗಳ ಸಂಖ್ಯೆ ಎಷ್ಟು; ಎಷ್ಟು ಅಡಿಗಳಲ್ಲಿ ನೀರು ದೊರೆತಿದೆ;

ಆ) ಆ ಕೊಳವೆ ಬಾವಿಗಳಿಗೆ ಬಳಸುವ ಮೋಟಾರು ಯಾವ ಕಂಪನಿಗೆ ಸೇರಿದ್ದಾಗಿರುತ್ತದೆ; ಪ್ರತಿಯೊಂದು ತಾಲ್ಲೂಕಿನ ಪ್ರತಿಯೊಂದು

ಹಳ್ಳಿಗಳಲ್ಲಿ ಕೊರೆದಂತಹ ಕೊಳವೆ ಬಾವಿ ಹಾಗೂ ಅದಕ್ಕೆ ತಗಲಿರುವ ವೆಚ್ಚದ ವಿವರವನ್ನು ನೀಡುವುದು;

ಇ) ಬಾಗೇಪಲ್ಲಿ – ಗುಡಿಬಂಡೆ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗಾಗಿ ಎಷ್ಟು ಹಳ್ಳಿಗಳಲ್ಲಿ ಸಿಸ್ಟರ್ನ್‌ಗಳು, ಕೊಳವೆ ಬಾವಿಗಳನ್ನು ಎಷ್ಟು ಮತ್ತು ಯಾವ್ಯಾವ ಹಳ್ಳಿಗಳಲ್ಲಿ ಅಳವಡಿಸಲಾಗಿದೆ (ಪ್ರತಿಯೊಂದು ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 2010–11ನೇ ಸಾಲಿನಲ್ಲಿ 158 ಕೊಳವೆ ಬಾವಿಗಳು ಮತ್ತು 2011–12ನೇ ಸಾಲಿನಲ್ಲಿ 295 ಕೊಳವೆ ಬಾವಿಗಳನ್ನು ಕೊರೆದಿದೆ. ಬಾಗೇಪಲ್ಲಿ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಸುಮಾರು 600 ಅಡಿಗಳಿಂದ 950 ಅಡಿಗಳ ಅಂತರದಲ್ಲಿ, ಉಳಿದ ತಾಲ್ಲೂಕುಗಳಲ್ಲಿ ಸುಮಾರು 900 ರಿಂದ 1200 ಅಡಿಗಳ ಆಳದಲ್ಲಿ ನೀರು ದೊರೆತಿದೆ.

ಆ) ಈ ವಿಭಾಗದಿಂದ ಕೊರೆದಿರುವ ಕೊಳವೆ ಬಾವಿಗಳಿಗೆ ಈ ವಿಭಾಗದಿಂದ ವಿತರಿಸಿರುವ ಮೆ॥ ಟೆಕ್ಸ್‌ಮೋ ಇಂಡಸ್ಟ್ರೀಸ್, ಕೊಯಂಬತ್ತೂರು ರವರು ತಯಾರಿಸಿರುವ "ಟ್ಯಾರೋ" ಬ್ರಾಂಡ್‌ನದ್ದಾಗಿರುತ್ತದೆ. ಗುತ್ತಿಗೆದಾರರು ನೇರವಾಗಿ ಅಳವಡಿಸಿರುವ ಪಂಪು ಮೋಟಾರ್‌ಗಳು ISI Brand ಮತ್ತು ಇತರೆ ತಯಾರಿಕಾ ಕಂಪನಿಗಳಿಂದ ಅಳವಡಿಸಿರುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೊರೆದಂತಹ ಕೊಳವೆ ಬಾವಿ ಹಾಗೂ ಅದಕ್ಕೆ ತಗಲಿರುವ ವೆಚ್ಚದ ವಿವರಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ.

ಇ) ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.

ಶ್ರೀ ಎನ್. ಸಂಪಂಗಿ : ನಾನು ಕೇಳಿರುವುದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಷ್ಟು ಕೊಳವೆ ಬಾವಿಗಳಿವೆ? ಮತ್ತೆ ಅದಕ್ಕೆ ಹಾಕಿರತಕ್ಕಂಥ ಪಂಪ್ ಮೋಟಾರ್‌ಗಳು ಯಾವ್ಯಾವು? ಪ್ರತಿ ಹಳ್ಳಿಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆದಿದ್ದೀರಿ? ಎಷ್ಟು ಮೋಟಾರ್‌ಗಳಿವೆ? ಆ ಮಾಹಿತಿ ನಾನು ಕೇಳಿದ್ದೇನೆ. ನಾನು ಜಿಲ್ಲೆಯಾದ್ಯಂತ ಮಾಹಿತಿ ಕೇಳಿದ್ದಕ್ಕೆ ಅವರು ಉತ್ತರ ಏನು ಕೊಟ್ಟಿದ್ದಾರೆಂದರೆ, ಕೇವಲ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳ ಮಾಹಿತಿ ಕೊಟ್ಟಿರುತ್ತಾರೆ. ಶಿಡ್ಲಘಟ್ಟ, ಗೌರಿಬಿದನೂರು ತಾಲ್ಲೂಕುಗಳ ಮಾಹಿತಿ ಇಲ್ಲ. ಜೊತೆಗೆ ಎಲ್ಲಾ ಮಾಹಿತಿಗಳು ಏಕೆಂದರೆ,

ಕೊಳವೆ ಬಾವಿಗಳ ಕಥೆ ಹೇಗಿದೆ ಎಂದರೆ, ಕೊಳವೆ ಬಾವಿಗಳನ್ನು ಕೊರೆಯುತ್ತಾರೆ ಮೋಟಾರ್‌ಗಳನ್ನು ಅಳವಡಿಸುತ್ತಾರೆ ಮತ್ತೆ ಕೆಲವು ದಿವಸಗಳ ನಂತರ ಮೋಟಾರ್‌ಗಳು ಖಾಲಿಯಾಗಿ ಬಿಡುತ್ತವೆ. ಆದರೆ, ಆ ಮೋಟಾರ್ ಎಲ್ಲಿದೆ ಎಂದು ಇವತ್ತಿನವರೆಗೆ ಕಂಡು ಹಿಡಿಯುವುದಕ್ಕೆ ಆಗಿಲ್ಲ. ಅಧಿಕಾರಿಗಳು ಇವತ್ತು ಎಲ್ಲಿಗಾದರೂ ಸರಿಯೇ ಕೊಳವೆ ಬಾವಿಗಳನ್ನು ಕೊರೆಯಿಸಿ ಬಿಡುತ್ತಾರೆ. ಈ ವರ್ಷ ಕೊರೆಸಿದರೆ ಮತ್ತೆ ಇನ್ನೊಂದು ವರ್ಷವಾದ ಮೇಲೆ ಮೋಟಾರ್ ಕೊಟ್ಟು ಮತ್ತೊಂದು ವರ್ಷಕ್ಕೆ service ಕೊಡುತ್ತಾರೆ. ಈ ಪರಿಸ್ಥಿತಿಯಲ್ಲಿ ಎಲ್ಲೂ ಕೂಡ ಕರೆಕ್ಟಾಗಿ ಜಿಲ್ಲೆಯಲ್ಲಿ ಆ ಮಾಹಿತಿಯೇ ಇಲ್ಲ. ನಾನು ಕೇಳಿರುವ ಪ್ರಶ್ನೆ ಇಡೀ ಕರ್ನಾಟಕದಲ್ಲಿ ಎಲ್ಲಾ ಹಳ್ಳಿಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ, ಆ ಬೋರ್‌ವೆಲ್‌ಗಳ ಎಲ್ಲಾ ಮಾಹಿತಿಯನ್ನು ತೆಗೆದು ಇಟ್ಟುಕೊಳ್ಳಬೇಕಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಎಷ್ಟು ಬೋರ್‌ಗಳನ್ನು ಕೊರೆದಿದ್ದೀರಿ? ಎಷ್ಟು ಮೋಟರ್ಸ್ ಹಾಕಿದ್ದೀರಿ? ಎಷ್ಟು ಮೋಟರ್ಸ್ ಕೆಲಸ ಮಾಡುತ್ತಿದೆ? ಎಷ್ಟು ಮೋಟಾರ್ಸ್ ಕೆಲಸ ಮಾಡುತ್ತಿಲ್ಲ? ಅದು ಯಾವ ಬ್ರಾಂಡ್‌ಗೆ ಸಂಬಂಧಿಸಿದ್ದು? ಏಕೆಂದರೆ ಇವತ್ತು ನಕಲಿ ಬ್ರಾಂಡ್‌ಗಳು ಬಹಳ ಬಂದಿವೆ. Original brand ಇಲ್ಲದೆ ನಕಲಿ brand ಗಳ ಮೋಟಾರ್‌ಗಳನ್ನು ಹಾಕಿ ಕೇವಲ ಕಳಪೆ ಸಾಮಾಗ್ರಿಗಳನ್ನು ತಂದು ಎರಡು ತಿಂಗಳಲ್ಲಿ ಕೆಟ್ಟು ಹೋಗುವ ಪರಿಸ್ಥಿತಿ ಬರುತ್ತದೆ. ನಂತರ ಅದನ್ನು ರಿಪೇರಿ ಮಾಡುವುದಿಲ್ಲ. ಅದಕ್ಕೆ ಇಡೀ ಕರ್ನಾಟಕದಲ್ಲಿ ಇಂಥ ಅವ್ಯವಹಾರ ನಡೆಯುತ್ತಿದೆ. ಆದುದರಿಂದ ನನ್ನ ಜಿಲ್ಲೆಯಲ್ಲಿ ಕೇಳಿರುವ ಪ್ರಶ್ನೆ ಏನೆಂದರೆ, ನನ್ನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಪ್ರತಿ ಹಳ್ಳಿಗಳಿಗೂ ಕೂಡ ಯಾವ್ಯಾವ ಬೋರ್‌ವೆಲ್‌ಗಳು ಯಾವ್ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಅಡಿಗಳು ಹಾಕಿದಿರಿ, ಎಷ್ಟೆಷ್ಟು ಅಡಿಗಳಲ್ಲಿ ನೀರು ಸಿಕ್ಕಿದೆ ಎನ್ನುವ ಮಾಹಿತಿ ನಾನು ಕೇಳಿದ್ದೇನೆ. ಅಧಿಕಾರಿಗಳ ಕೊಟ್ಟ ಉತ್ತರದಲ್ಲಿ ಇದು ಎಲ್ಲಿಯೂ ಇಲ್ಲ ಅದಕ್ಕೆ ನನಗೆ ಸ್ಪಷ್ಟವಾದ ಉತ್ತರ ಕೊಡಿ.

ಶ್ರೀ ಎನ್. ಹೆಚ್. ಶಿವಶಂಕರರೆಡ್ಡಿ : ಮಾನ್ಯ ಮಂತ್ರಿಗಳೆ, ಮಾನ್ಯ ಸಂಪಂಗಿಯವರು ಕೇಳಿದ ಮಾಹಿತಿ ಬಹಳ ಅಗತ್ಯವಿದೆ. ಏಕೆಂದರೆ, ಯಾವ ಪಂಚಾಯಿತಿಯಲ್ಲಿ ಎಷ್ಟು ಬೋರ್‌ವೆಲ್ಸ್ ಇವೆ ಎನ್ನುವ ವಿವರ ಇರುವುದಿಲ್ಲ. ಯಾವಾಗ ಕೊರೆದಿದ್ದು, ಎಷ್ಟು ಆಳ, ಅಳವಡಿಸಿರುವ ಪಂಪ್‌ಸೆಟ್ಟು, ಈ ಮಾಹಿತಿ ಯಾವ ಪಂಚಾಯಿತಿಯಲ್ಲಿ ಇಟ್ಟಿಲ್ಲ. ದಯಮಾಡಿ ಆ ಡೇಟಾ ಬೇಸ್ ಇಡುವುದು ಒಳ್ಳೆಯದು. ಅದರ ಬಗ್ಗೆ ತಾವು ಉತ್ತರ ಹೇಳಬೇಕು.

ಶ್ರೀ ಕೆ.ಪಿ. ಬಚ್ಚೇಗೌಡ : ಇದೇ ವಿಚಾರವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂತರ್ಜಲ ಕುಸಿದಿರುವುದರಿಂದ ಯಾವುದೇ ಕೊಳವೆ ಬಾವಿ ಎರಡು ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಕೆಲಸ ಮಾಡಲ್ಲ. ಆ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ನಾವೇನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬೋರ್‌ವೆಲ್ ಕೊರೆದು ಮೋಟರ್ಸ್ ಅಳವಡಿಸಿ ಕೊಟ್ಟಿರುತ್ತೇವೆ, ಅದು ಬತ್ತಿ ಹೋದ ಸಂದರ್ಭದಲ್ಲಿ ಆ ಮೋಟರ್ ಪಂಪ್ ಏನಾಯಿತು, ಅಲ್ಲಿರತಕ್ಕಂಥ ಪರಿಕರಗಳು ಏನಾದವು ಎನ್ನುವ ಮಾಹಿತಿ ಯಾವ ಗ್ರಾಮ ಪಂಚಾಯಿತಿಯಲ್ಲಿಯೂ ಇಲ್ಲ. ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆದಾಗ ತುರ್ತಾಗಿ ಪಂಪ್ ಮೋಟಾರ್‌ನ್ನು ಅಳವಡಿಸಿ ಹೊಸದು ಬರುವವರೆವಿಗೂ ನೀರು ಬಿಡಿ ಎಂದರೆ ಯಾವ ಗ್ರಾಮ ಪಂಚಾಯಿತಿಯಲ್ಲಿಯೂ ಒಂದು ಮೋಟಾರ್ ಪಂಪ್ ಇಲ್ಲ. ಹಾಕಿರುವ ಮೋಟಾರ್ ಪಂಪ್‌ಗಳ ಮಾಹಿತಿ, ಯಾವ ಗ್ರಾಮ ಪಂಚಾಯಿತಿಯಲ್ಲಿ ಇಟ್ಟಿಲ್ಲ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಿರ್ದೇಶನ ನೀಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಂಪಂಗಿಯವರು ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಕುಡಿಯುವ ನೀರಿಗಾಗಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಅದರ ಬಗ್ಗೆ ವಿವರವಾಗಿ ಅನುಬಂಧದಲ್ಲಿ ನಾನು ಮಾಹಿತಿ ಕೊಟ್ಟಿದ್ದೇನೆ. ಇಡೀ ಜಿಲ್ಲೆಗೆ ಒಟ್ಟು ಎಷ್ಟು ಎಂದರೆ 2010–11 ನೇ ಸಾಲಿನಲ್ಲಿ 158 ಕೊಳವೆ ಬಾವಿಗಳನ್ನು ನಾವು ಕೊರೆದಿದ್ದೇವೆ. 2011–12ನೇ ಸಾಲಿನಲ್ಲಿ 295 ಕೊಳವೆ ಬಾವಿಗಳನ್ನು ನಾವು ಕೊರೆದಿದ್ದೇವೆ. ತಾಲ್ಲೂಕಿಗೆ ಸಂಬಂಧಪಟ್ಟಂಥ ವಿವರಗಳನ್ನು ನಾವು ಅನುಬಂಧದಲ್ಲಿ ನೀಡಿದ್ದೇವೆ. ಅವರು ಈಗೇನು ಕೆಲವು ಸಲಹೆ ಸೂಚನೆಗಳನ್ನು ಕೊಟ್ಟರು. ಅದರಲ್ಲಿ ಕೆಲವು ಮಾಹಿತಿಗಳು ಇರುವುದಿಲ್ಲ ಎಷ್ಟು ಕೊರೆದಿದ್ದಾರೆ ಎನ್ನುವ ಮಾಹಿತಿ ಇಲ್ಲವೆಂದು ಹೇಳಿದರು. ನಮ್ಮ ಇಲಾಖೆಯಲ್ಲಿ ನಮ್ಮ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯಿತಿಯಲ್ಲಿ ಎಷ್ಟೆಷ್ಟು ಬೋರ್‌ವೆಲ್ ಗಳನ್ನು ಕೊರೆದಿದ್ದೇವೆ ಎನ್ನುವಂಥ ಮಾಹಿತಿ ಇದೆ. ಇದಾದ ಮೇಲೂ ಸಹಿತ ನಿರ್ದಿಷ್ಟವಾಗಿ ಅದರಲ್ಲಿ ಎಷ್ಟು ಕೆಟ್ಟು ಹೋಗಿವೆ, ಎಷ್ಟು ಡಿಫಂಕ್ಟ್ ಆಗಿವೆ, ಇದರ ಬಗ್ಗೆ ನಾವು ಮಾಹಿತಿ ತೆಗೆದುಕೊಳ್ಳುವುದು ಅವಶ್ಯವಿದೆ. ಕೆಲವೊಂದು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪೈಲಟ್ ಪ್ರಾಜೆಕ್ಟ್ ನಾವು ಮಾಡಿದ್ದೇವೆ. GIS

ಎನ್ನುವ system ಅನ್ನು ತಂದು ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿರುವ ರಸ್ತೆಗಳು ಎಷ್ಟು, ಮಣ್ಣಿನ ರಸ್ತೆ ಎಷ್ಟು, ಬೋರ್‌ವೆಲ್‌ಗಳು ಎಷ್ಟು ಇದೆ, ಇದೆಲ್ಲಾ ಅಂಕಿ ಅಂಶಗಳನ್ನು ಒಂದು ಕಡೆ ಅಳವಡಿಕೆ ಮಾಡಿ ಮಾಹಿತಿ ಸಂಗ್ರಹಿಸುವ process ನಾವು ಶುರು ಮಾಡಿದ್ದೇವೆ. ಒಂದು ಸಾರಿ ಆ process ಶುರು ಮಾಡಿ, ಎಲ್ಲಾ ಮಾಹಿತಿ ನಾವು ಇಟ್ಟುಕೊಂಡು ಬಿಟ್ಟರೆ ಆಗ ಯಾರೂ ಏನೂ ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಪ್ರಯತ್ನ ನಾವು ಮಾಡುತ್ತಿದ್ದೇವೆ. maintenance, defunct, recharge ಮಾಡುವಂಥದ್ದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಕೆಲಸ ನಾವು ಮಾಡುತ್ತೇವೆ. ಅದಕ್ಕಾಗಿ ಇಲ್ಲಿ ಸಾಕಷ್ಟು ಮಹತ್ವದ ವಿಚಾರಗಳನ್ನು ಕೊಟ್ಟಿದ್ದೇವೆ. ಇನ್ನು ನಮ್ಮ ಸದಸ್ಯರಿಗೆ ಮಾಹಿತಿ ಬೇಕಾದರೆ ನಾವು ಒದಗಿಸುವುದಕ್ಕೆ ತಯಾರಿದ್ದೇನೆ.

ಶ್ರೀ ಎನ್. ಸಂಪಂಗಿ : ಮಾನ್ಯ ಸಚಿವರು ಉತ್ತರ ಹೇಳಿರುವುದು correct. ಆದರೆ ನಾನು ಪ್ರತಿಯೊಂದು ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳಲ್ಲಿರುವ ಮಾಹಿತಿ ಕೊಡಿ ಎಂದು ತಮ್ಮಲ್ಲಿ ಕೇಳಿದ್ದೇನೆ. ತಾವು ಕೇವಲ ಒಟ್ಟಾರೆಯಾಗಿ 158 ಕೊಳವೆ ಬಾವಿಗಳೆಂದು ಕೊಟ್ಟಿದ್ದೀರಿ. ನನ್ನ ಉದ್ದೇಶ ಏನೆಂದರೆ, ಎಲ್ಲಾ ಹಳ್ಳಿಗಳಲ್ಲಿರತಕ್ಕಂಥ ಕೊಳವೆ ಬಾವಿಗಳ ಮಾಹಿತಿಯನ್ನು ನೀವು ತರಿಸಿಕೊಳ್ಳಿ. ಏಕೆಂದರೆ, ಎಲ್ಲಾ ಮಾಹಿತಿಗಳು ಇದ್ದರೆ ಒಳ್ಳೆಯದು. ಇವತ್ತು ಎಷ್ಟೋ ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ಆದರೆ, ಕೊಳವೆ ಬಾವಿಗಳಿಗೆ ಮೋಟಾರ್ ಇಲ್ಲವೆಂದು ನಮಗೆ ಹೇಳಿ ನೀರಿನ ಸೌಕರ್ಯ ಇಲ್ಲದಂತಾಗಿದೆ. ನಮ್ಮದು ಬರ ಪ್ರದೇಶ, ಹಿಂದೆ ಕೊಳವೆ ಬಾವಿಗಳನ್ನು ಕೊರೆದಿರುವುದಕ್ಕೆ ಮೋಟಾರ್‌ಗಳನ್ನು ಹಾಕಿದರೆ ಎರಡು ಹಳ್ಳಿಗಳಿಗೆ ನೀರು ಕೊಡುವುದಕ್ಕೆ ಆಗುತ್ತದೆ. ಹೋದ ವರ್ಷ ಕೊಳವೆ ಬಾವಿಗಳನ್ನು ಹಾಕಿರುವುದಕ್ಕೆ ಇವತ್ತು ಕೂಡ ಮೋಟಾರ್ ಕೊಡುತ್ತಿಲ್ಲ. ಇನ್ನೊಂದು ಪ್ರಶ್ನೆ ಏನೆಂದರೆ, cisterns ಗಳನ್ನು ಯಾವ್ಯಾವ ಹಳ್ಳಿಗಳಲ್ಲಿ ಎಲ್ಲೆಲ್ಲಿ ಹಾಕಿದ್ದೀರಿ ಎಂದು ಕೇಳಿದ್ದೇನೆ. ಆ cisterns ಗಳ ಮಾಹಿತಿಯನ್ನು ಇವರು ಎಲ್ಲೂ ಕೊಟ್ಟಿಲ್ಲ. ನಾನು ಕೇವಲ ಬಾಗೇಪಲ್ಲಿ ಮತ್ತು ಗುಂಡಿಬಂಡೆಗೆ ಸೀಮಿತವಾಗಿ ಕೇಳಿದ್ದೇನೆ. ಇಡಿಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ 500 ಹಳ್ಳಿಗಳಿವೆ. ಅವರು ಕೊಟ್ಟಿರುವುದು ಕೇವಲ ಮೂರು ಪಂಚಾಯಿತಿಗಳ ಮಾಹಿತಿ ಕೊಟ್ಟಿದ್ದಾರೆ. ಅಂದರೆ 70 ಹಳ್ಳಿಗಳಿಗೆ ಮಾತ್ರ ಕೊಟ್ಟಿದ್ದಾರೆ. ಇನ್ನು ಉಳಿದ ಎಲ್ಲಾ ಹಳ್ಳಿಗಳಿಗೆ ಎಷ್ಟು cistern ಗಳನ್ನು ಇವರು ಕೊಟ್ಟಿದ್ದಾರೆ?

ಅದರ ಮಾಹಿತಿ ಕೊಡಬೇಕು. ಈ ಮಾಹಿತಿ ನಿಮ್ಮಲ್ಲಿದ್ದರೆ ಒಳ್ಳೆಯದಾಗುತ್ತದೆ ಸಚಿವರೇ ಅದಕ್ಕೋಸ್ಕರ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಂಪಂಗಿಯವರು ಇಡಿ ಜಿಲ್ಲೆಯ ಬಗ್ಗೆ ಮಾಹಿತಿ ಕೇಳಿದ್ದಾರೆ, ನಾನು ಒಟ್ಟಾರೆಯಾಗಿರುವ ಸಂಖ್ಯೆಯನ್ನು ಕೊಟ್ಟಿದ್ದೇನೆ. ಅವರ ತಾಲ್ಲೂಕಿಗೆ ಸಂಬಂಧಿಸಿದ ಮಾಹಿತಿ ಕೊಟ್ಟಿದ್ದೇನೆ. ಇಡೀ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಯ ಮಾಹಿತಿ ಬೇಕೆಂದು ಕೇಳಿದ್ದಾರೆ, ನಾನು ಪ್ರತ್ಯೇಕವಾಗಿ ಒದಗಿಸಿ ಕೊಡುತ್ತೇನೆ.

ಸಹಕಾರ ಸಕ್ಕರೆ ಕಾರ್ಖಾನೆಗಳು

72 (376) ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ) : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಹಕಾರ ಕಾಯಿದೆಯಡಿ ನೋಂದಣಿಯಾಗಿರುವ ಸಕ್ಕರೆ ಕಾರ್ಖಾನೆಗಳೆಷ್ಟು; ಅವು ಯಾವುವು;

ಆ) ಈ ಕಾರ್ಖಾನೆಗಳ ಪೈಕಿ ಚುನಾಯಿತ, ಆಡಳಿತ ಮಂಡಳಿ ಇದ್ದು ದೈನಂದಿನ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆಯೇ;

ಇ) ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಲೀಸ್ ಕೊಡಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ) ಸಹಕಾರ ಕಾಯಿದೆ ಮತ್ತು ತತ್ವಗಳಿಗನುಗುಣವಾಗಿ ಖಾಸಗಿಯವರಿಗೆ ಲೀಸ್ ಕೊಡಲು ಅವಕಾಶವಿದೆಯೇ; ಹಾಗಿಲ್ಲದಿದ್ದಲ್ಲಿ, ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 40 ಸಹಕಾರ ಸಕ್ಕರೆ ಕಾರ್ಖಾನೆಗಳು ಸಹಕಾರ ಕಾಯಿದೆಯಡಿ ನೋಂದಣಿಯಾಗಿರುತ್ತವೆ. ಅವುಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಈ ಕಾರ್ಖಾನೆಗಳ ಪೈಕಿ 18 ಸಹಕಾರ ಸಕ್ಕರೆ ಕಾರ್ಖಾನೆಗಳು ಚುನಾಯಿತ ಆಡಳಿತ ಮಂಡಳಿ ಹೊಂದಿದ್ದು ದೈನಂದಿನ ಕಾರ್ಯಗಳನ್ನು ನಿರ್ವಹಿಸುತ್ತಿವೆ (ಅನುಬಂಧ–2).